**ದಿನಾಂಕ: 26/03/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಬಿ.ಜಿ.ಎಸ್ ವಕೀಲರಿಂದ:**

1. ವಾದಿ ಸರ್ವೆ ನಂ.75/1 ಕ್ಕೆ ಈ ದಾವೆಯನ್ನು ಹೂಡಿದ್ದಾರೆ. ಸರ್ವೆ ನಂ.75 ಎಷ್ಟು ಪೋಡುಗಳಾಗಿದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.75/1 ರಲ್ಲಿ 30 ಗುಂಟೆ ಇದೆ. ಸರ್ವೇ ಮಾಡಿದಾಗ 9 ವರೆ ಗುಂಟೆ ಶಾಲೆಗೆ ಒತ್ತುವರಿಯಾಗಿದೆ ಎಂದು ಗೊತ್ತಾಯಿತು. ನೀವು ಬೆಟ್ಟದಪುರ ಗ್ರಾಮದ ವಾಸಿ ಎಂದರೆ ಬಾರ್ಸೆ ಗ್ರಾಮದ ವಾಸಿ ಎಂದು ನುಡಿಯುತ್ತಾ ಜಾಸ್ತಿ ದಿನ ಬಾರ್ಸೆ ಗ್ರಾಮದಲ್ಲಿರಲಿಲ್ಲ ಎಂದು ನುಡಿಯುತ್ತಾರೆ. ನಾನು ಹುಟ್ಟಿದ್ದು ಬಾರ್ಸೆ ಗ್ರಾಮದಲ್ಲಿ. 1960 ರಲ್ಲಿ ನಮ್ಮ ಬಾರ್ಸೆ ಗ್ರಾಮದಲ್ಲಿ ಪ್ರಾಥಮಿಕ ಶಾಲೆ ಇತ್ತು ಎಂದರೆ ಸರಿ. 1960 ರಲ್ಲೇ ಆ ಶಾಲೆ ಕಟ್ಟಿದ್ದರು ಎಂದರೆ ಸರಿ. 1960 ರಲ್ಲಿ ಶಾಲಾ ಕಟ್ಟಡವು ಪೂರ್ತಿಯಾಗಿತ್ತು ಎಂದರೆ ಸರಿಯಲ್ಲ. 2014 ರಲ್ಲಿ ಹೊಸ ಕಟ್ಟಡದ ಕಾಮಗಾರಿ ನಡೆಯುತ್ತಿತ್ತು.

2. ನಾನು ವಾದಿ ಬರೆಸಿಕೊಂಡ ಕ್ರಯಪತ್ರದಲ್ಲಿ ಸಹಿ ಮಾಡಿದ್ದೇನೆ. ಕ್ರಯಪತ್ರದಲ್ಲಿ ಪಶ್ಚಿಮ ದಿಕ್ಕಿನಲ್ಲಿ ಸ್ಕೂಲ್ ಕಟ್ಟಡ ಇದೆ ಎಂದು ನಮೂದಿಸಿದ್ದಾರೆ ಎಂದರೆ ಸರಿ. ವಾದಿ ನಾಗಮಣಿಯಿಂದ ಕ್ರಯಪತ್ರವನ್ನು ಬರೆಸಿಕೊಂಡಿದ್ದಾರೆ. ಕ್ರಯಪತ್ರದ ಒಕ್ಕಣೆಯನ್ನು ಓದಿ ತಿಳಿದುಕೊಂಡಿದ್ದೇನೆ. ಅದರಲ್ಲಿ ನಮೂದಿಸಿರುವ ಚಕ್ಕುಬಂದಿ ಗೊತ್ತು. ಈ ದಾವೆಯನ್ನು ಯಾವ ಚಕ್ಕುಬಂದಿ ನಮೂದಿಸಿ ಹೂಡಿದ್ದಾರೆಂದು ಗೊತ್ತಿಲ್ಲ. 9 ವರೆ ಗುಂಟೆ ಜಮೀನಿನ ಚಕ್ಕುಬಂದಿ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಪಶ್ಚಿಮ ದಿಕ್ಕಿನಲ್ಲಿ 9 ವರೆ ಗುಂಟೆ ಒತ್ತುವರಿಯಾಗಿದೆ ಎಂದು ನುಡಿಯುತ್ತಾರೆ.

3. 2014 ರಲ್ಲಿ ಸರ್ವೇ ಮಾಡಲು ಬಂದಿದ್ದರು. ಅಕ್ಕಪಕ್ಕದ ಯಾವ ಯಾವ ಸರ್ವೆ ನಂಬರುಗಳಿಗೆ ಅಳತೆ ಮಾಡಲು ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಸರ್ವೇ ಮಾಡುವಾಗ ನಕ್ಷೆ ತಯಾರಿಸಿದರು, ಅದಕ್ಕೆ ಸಹಿ ಮಾಡಿದ್ದೇನೆ.

4. ಬಾರ್ಸೆ ಗ್ರಾಮದ ಸುಬ್ಬರಾಜೇ ಅರಸು ರವರ ಮಗ ನಂಜುಂಡರಾಜೇ ಅರಸು ರವರು ಗೊತ್ತು. ಅವರು ದಿ:28/07/2003 ರಂದು ಸರ್ವೆ ನಂ.75/2 ರಲ್ಲಿ ಪೂರ್ವ-

ಪಶ್ಚಿಮ 124 ಅಡಿ, ದಕ್ಷಿಣೋತ್ತರ 156 ಅಡಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಯವರ ಪರವಾಗಿ ರಾಜ್ಯಪಾಲರಿಗೆ ದಾನಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿ. ಅವರು ಪೂರ್ವಕ್ಕೆ ನಾಗಮಣಿಯವರ ಜಮೀನು, ಪಶ್ಚಿಮಕ್ಕೆ ನನ್ನ ಬಾಬ್ತು ಉಳಿಕೆ ಜಮೀನು, ದಕ್ಷಿಣಕ್ಕೆ ಸಿ.ಚಾಮರಾಜೇ ಅರಸು ರವರ ಜಮೀನು, ಉತ್ತರಕ್ಕೆ ನನ್ನ ಬಾಬ್ತು ಬೇರೆ ಜಮೀನು ಎಂಬ ಚಕ್ಕುಬಂದಿಯನ್ನು ನಮೂದಿಸಿ ದಾನಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿ. ಈಗ ಹೇಳಿದ ಚಕ್ಕುಬಂದಿಯಲ್ಲಿ ವಾದಿಗೆ ಯಾವುದೇ ಹಕ್ಕು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ.

5. ನಂಜುಂಡಯ್ಯನವರ ಹೆಂಡತಿ ವನಜಾಕ್ಷಿ ಸರ್ವೆ ನಂ.72/1ರ 1 ಎಕರೆ 13 ಗುಂಟೆ ಜಮೀನನ್ನು ದಿಃ17/06/2010ರಂದು ರಾಜ್ಯಪಾಲರಿಗೆ ದಾನಪತ್ರ ಬರೆದು ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಂಜುಂಡರಾಜೇ ಅರಸು ಮತ್ತು ವನಜಾಕ್ಷಿ ರವರು ಬರೆದುಕೊಟ್ಟ ಚಕ್ಕುಬಂದಿಯಲ್ಲೇ 1ನೇ ಪ್ರತಿವಾದಿ ಶಾಲೆಯನ್ನು ಕಟ್ಟಿಕೊಂಡಿದ್ದಾರೆ ಎಂದರೆ ಸರಿ. ವಾದಿ ನನ್ನ ತಂಗಿಯ ಅಳಿಯ. ನಾಗಮಣಿ ನನ್ನ ಅತ್ತಿಗೆ. ನಾಗಮಣಿ ಮತ್ತು ವಾದಿ ನನ್ನ ಸಂಬಂಧಿರಾದ್ದ ಕಾರಣ ಶಾಲೆಯ ಸ್ವತ್ತನ್ನು ಕಬಳಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1960-65ರಲ್ಲೇ ಶಾಲೆಯನ್ನು ಕಟ್ಟಿದ್ದರಿಂದ ಈಗ ಹೊಸದಾಗಿ ಶಾಲೆಯನ್ನು ಕಟ್ಟುವ ಪ್ರಮೇಯ ಇಲ್ಲ ಎಂದರೆ ಸರಿಯಲ್ಲ. ಶಾಲೆಯವರು ಯಾವುದೇ ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿ ಖರೀದಿಸುವ ಕಾಲಕ್ಕೆ ಸ್ವತ್ತು ನಾಗಮಣಿಯವರ ಹೆಸರಿನಲ್ಲಿರಲಿಲ್ಲ ಎಂದರೆ ಸರಿಯಲ್ಲ. ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**